MASTER PLAN TO CONSTRUCT ROADS AND BRIDGES

390. Sri S. M. SHEERANALY CHANDRASHEKAR : (Hosanagar)—

Will the Minister for Public Works and Electricity be pleased to state :—

(*a*) whether the Government is preparing a master plan to construct roads and bridges in the State;

(*b*) if so, whether they have appointed any Committee to work out to the details in matter;

(*c*) the action the Committee has taken to finalise list of bridges and roads to be taken up for construction;

(*d*) whether it is a fact that a Legislator from Hosanagar Constituency had given a list of bridges and roads to be constructed in Hosanagar Constituency *i. e.*, Kumsi and Harnahalli Hobli of Shimoga Taluk, Anandapuram Hobli of Sagar Taluk, Nyamatti area of Honnali Taluk and of Hosanagar Taluk;

(*e*) if so, the steps taken to construct roads and bridges at the places referred to in clause (*d*)?

Sri H. M. CHANNABASAPPA (Minister for Public Works and Electricity) :

(*a*) A Master plan for Rural Communications has been got up.

(*b*) No Committee has been constituted for Rural Communications in the State.

(*c*) Does not arise in view of reply to Clause (*b*) of the question.

(*d*) Yes; joint lists of roads and bridges (pertaining to Rural Communications) have been given by the Legislators and Member of Parliament.

(*e*) They are under consideration.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್ : (ಅ) ಪ್ರಶ್ನೆಗೆ ಉತ್ತರವಾಗಿ " ಗ್ರಾಮಾಂತರ ಸಂಪರ್ಕದ ಬಗ್ಗೆ ಬೃಹತ್ ಯೋಜನೆಯೊಂದನ್ನು ಸಿದ್ಧಗೊಳಿಸಲಾಗಿದೆ ಎಂದು ತಿಳಿಸಲಾಗಿದೆ. ಇದರ ರೂಪರೇಷೆ ಯೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ : ೨೬,೫೦೩ ಕಿಲೋಮೀಟರು ರಸ್ತೆಗೆ ಸುಮಾರು ೧೧೭ ಕೋಟಿ ೮೯ ಲಕ್ಷ ರೂಪಾಯಿ ಬೇಕಾಗುತ್ತದೆ. ಇದು ರಸ್ತೆ ಸುಧಾರಣೆ ಮತ್ತು ೧೪,೭೫೨ ಕಿಲೋಮೀಟರು ರಸ್ತೆಗಳ ನಿರ್ಮಾಣ ಸಹ ಅಳವಡಿಸಿಕೊಂಡಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ : ಗ್ರಾಮಾಂತರ ಸಂಪರ್ಕದ ಬಗ್ಗೆ ಸಮಿತಿಯನ್ನೇನೂ ರಚಿಸಿರುವುದಿಲ್ಲ ಎಂದು ಉತ್ತರವಿದೆ. ನನಗೆ ನೆನಪಿರುವ ಹಾಗೆ ಒಂದುವರೆ ವರ್ಷದ ಹಿಂದೆ ಒಂದು ಸಮಿತಿ ಮಾಡಲು ತೀರ್ಮಾನ ಮಾಡಿರುವದಾಗಿ ಹೇಳಿದ್ದರು. ಅಂಥ ಸಮಿತಿಯನ್ನು ರಚಿಸುವುದರ ಬಗ್ಗೆ ಯೋಚನೆ ಮಾಡಿದ್ದೀರಾ ? ಕರ್ನಾಟಕದಾದ್ಯಂತ ಇರುವ ರಸ್ತೆ ಮತ್ತು ಸೇತುವೆಗಳಿಗಾಗಿ ಒಂದು ಸಮಿತಿ ರಚಿಸುವುದು ಏನಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ : ತಾವು ಸ್ವಲ್ಪ ಆಟೆಂಟಿವ್ ಆಗಿರಲಿಲ್ಲವೆಂದು ಕಾಣುತ್ತದೆ. ಸೇತುವೆಯ ನಿರ್ಮಾಣಕ್ಕಾಗಿ ಕಾರ್ಪೊರೇಷನ್ ಮಾಡಬೇಕೆಂದು ಇದ್ದೇವೆಂದು ಹೇಳಿದ್ದೇನೇ ಹೊರತು ರಸ್ತೆ ನಿರ್ಮಾಣಕ್ಕಾಗಿ ಸಮಿತಿ ಮಾಡುತ್ತೇವೆಂದು ಹೇಳಿರಲಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ : ಪ್ರತಿಯೊಂದು ಕೋಳಿ ಕೂಗುವ ಊರಿಗೂ ಒಂದೊಂದು ರಸ್ತೆ ಮಾಡುವುದಾಗಿ ಒಂದುವರೆ ವರ್ಷದ ಹಿಂದೆ ಹೇಳಿದ್ದೀರಿ. ಈಗ ಒಂದುವರೆ ವರ್ಷವಾಗಿದೆ. ಇನ್ನು ಒಂದುವರೆ ವರ್ಷದೊಳಗೆ ಹಾಗೆ ಮಾಡುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ : ನಾನು ಹೇಳಿದ್ದು ಪ್ರತಿಯೊಂದು ತಾಲ್ಲೂಕಿಗೂ ೮೦ ಕಿಲೋಮೀಟರು ರಸ್ತೆ ಮಾಡುತ್ತೇವೆಂದು. ಆ ಕೆಲಸವನ್ನು ೩–೪ ವರ್ಷಗಳಲ್ಲಿ ಮುಗಿಸುತ್ತೇವೆ ಎಂದು. ಅದಕ್ಕೆ ತಕ್ಕ ವ್ಯವಸ್ಥೆ ಮಾಡಲಾಗುತ್ತಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ : ಟೆಂಟೇಟಿವ್ ಲಿಸ್ಟ್ ಪ್ರಕಾರ ೫೦ ಕೋಟಿ ರೂಪಾಯಿ ಇರುವುದು. ೧೧೭ ಕೋಟಿಯಲ್ಲಿ ಅದೂ ಸೇರಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ : ಇಲ್ಲ. ೧೧೭ ಕೋಟಿ ರೂಪಾಯಿಗಳದು ಮಾಸ್ಟರ್ ಪ್ಲಾನು. ಪ್ರತಿಯೊಂದು ಹಳ್ಳಿಗೂ ರಸ್ತೆ ಮಾಡುವುದಕ್ಕೆ ಅದು ಸಂಬಂಧಪಟ್ಟಿದೆ. ೫೦ ಕೋಟಿ ರೂಪಾಯಿ ಇರುವುದು ಸಣ್ಣ ಮತ್ತು ದೊಡ್ಡ ಸೇತುವೆಗಳಿರಡಕ್ಕೂ ಸೇರಿ. ಸಣ್ಣ ಸೇತುವೆಗಳಿಗೆ ೩೪ ಅಥವಾ ೩೫ ಕೋಟಿ ರೂಪಾಯಿ. ದೊಡ್ಡ ಸೇತುವೆಗಳಿಗೆ ನೂರು ಕಿಲೋಮೀಟರಿನ ಮೇಲಿರುವುದಕ್ಕೆ ೨೫ ಕೋಟಿ ರೂಪಾಯಿ ಮೇಲ್ಪಟ್ಟು ಖರ್ಚಾಗುವುದು. ಸೇತುವೆಗಳಿಗೆ ಕಾರ್ಪೊರೇಷನ್ ಮಾಡಿದರೆ ಸುಂಕ ಹಾಕಿ ಸಾಲ ತೆಗೆದಿರುವುದನ್ನು ಕೊಡಬಹುದು, ರಸ್ತೆಗಳಿಗೆ ಸಾಲ ಮಾಡಿದರೆ ಕೊಡಲು ಸಾಧ್ಯವಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂಪ್ರಶೇಖರ್ : ಈ ಪ್ರಶ್ನೆ ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಡಲಾಗಿದೆ. ಈಗ್ಗೆ ಒಂದುವರೆ ವರ್ಷದ ಹಿಂದೆ ೩ ವರ್ಷದಲ್ಲಿ ಈ ಬೃಹತ್ ಯೋಜನೆ ಕಾರ್ಯಗತ ಮಾಡಲು ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದರು. ಇದು ಯಾವಾಗ ಪ್ರಾರಂಭವಾಗುವುದು ?

ಶ್ರೀ ಎಚ್. ಎಂ. ಚನ್ನಬಸಪ್ಪ : ಆ ರೀತಿ ಹೇಳಿಲ್ಲ. ಪ್ರತಿ ತಾಲ್ಲೂಕಿಗೆ ೫೦ ಮೈಲಿ ಪ್ರಕಾರ ರಸ್ತೆ ಮಾಡುವ ವಿಚಾರ ಹೇಳಿತ್ತು, ಅದಕ್ಕೆ ಕಾಲ ಬೇಕಾಗುತ್ತದೆ. ಇದು ಬೃಹತ್ ಯೋಜನೆಯಲ್ಲಿ ಸೇರಿಲ್ಲ.

COPPER AND GOLD MINING IN SHORAPUR TALUK

391. *Sri RAJA PID NAIK (Shorapur) :

Will the Minister for Industries and Parliamentary Affairs be pleased to state :—

whether there is a proposal before the Government to take up Copper mining at Thinthini and Gold Mining at Mangalore in Shorapur taluk, Gulbarga District; if so, the stage at which the matter is pending?

Sri S. M. KRISHNA (Minister for Industries & Parliamentary Affairs) :

The State Government have taken up investigation of Copper deposits at Thinthini, Shorapur taluk and the exploratory work is under progress.

There is a proposal before Government regarding exploration of the gold deposits at Mangalore.

Sri RAJA PID NAIK :

May I know the estimated capital outlay on the Copper Ore Mine at Thinthini?